# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **155** |
| ಸದಸ್ಯರ ಹೆಸರು | ಶ್ರೀ ಎಂ. ಎಲ್. ಅನಿಲ್‌ಕುಮಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.09.2022. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು) | ಬಂದಿರುತ್ತದೆ.<br>ಕೋಲಾರ ಜಿಲ್ಲೆಯಲ್ಲಿ ಅಕ್ರಮ ಕಲ್ಲುಗಣಿ ಚಟುವಟಿಕೆ ನಡೆಸುವ ಪ್ರಕರಣಗಳನ್ನು ಪತ್ತೆಹಚ್ಚಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಲು ಹಾಗೂ ದಂಡ ವಿಧಿಸಿ ಸಂಗ್ರಹಿಸಲು ಕ್ರಮ ವಹಿಸಲಾಗಿದ್ದು, ವಿವರಗಳು ಕೆಳಕಂಡಂತಿದೆ:<br>(₹ಲಕ್ಷಗಳಲ್ಲಿ) |

| ಕ್ರ. ಸಂ | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ಮೊಕದ್ದಮೆಗಳ ಸಂಖ್ಯೆ | ದಂಡದ ಮೊತ್ತ |
|---|---|---|---|---|
| 1. | 2019-20 | 87 | 18 | 29.00 |
| 2. | 2020-21 | 305 | 6 | 155.18 |
| 3. | 2021-22 | 160 | 3 | 84.53 |
| 4. | 2022-23 (ಆಗಸ್ಟ್ ಅಂತ್ಯಕ್ಕೆ) | 93 | 3 | 45.14 |
| ಒಟ್ಟು | | 645 | 30 | 313.85 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕೋಲಾರ ಜಿಲ್ಲೆಯ ಬಂಡೇಹಳ್ಳಿ ಗ್ರಾಮದಲ್ಲಿ ಕಲ್ಲುಗಣಿಗಾರಿಕೆ ಮಾಡಬಾರದೆಂದು ಜಿಲ್ಲಾಡಳಿತ ಆದೇಶ ಮಾಡಿದ್ದರೂ ಕೂಡ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು - | ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಬಂಡಹಳ್ಳಿ ಗ್ರಾಮದಲ್ಲಿ ಕಲ್ಲುಗಣಿಗಾರಿಕೆ ಮಾಡಬಾರದೆಂದು ಜಿಲ್ಲಾಡಳಿತದಿಂದ ಯಾವುದೇ ಆದೇಶ ಇರುವುದಿಲ್ಲ.<br>ಭಾರತಮಾಲಾ ಪರಿಯೋಜನೆ ಅಡಿಯಲ್ಲಿ ಬಂಗಾರಪೇಟೆ ಯಿಂದ ಬೇತಮಂಗಲ ರವರೆಗೆ ಬೆಂಗಳೂರು ಚೆನ್ನೈ ಎಕ್ಸ್ ಪ್ರೆಸ್ ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಅವಶ್ಯಕವಿರುವ ಕಟ್ಟಡ ಕಲ್ಲಿನ ಉತ್ಪನ್ನಗಳಾದ ಎಂ-ಸ್ಯಾಂಡ್, ಜಲ್ಲಿ ಪೂರೈಕೆಗಾಗಿ ಕಾಮಗಾರಿ ಗುತ್ತಿಗೆದಾರರಾದ ಮೆ|| ಕೆಸಿಸಿ ಬಿಲ್ಡ್ ಕಾನ್ ಲಿ., ರವರಿಗೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಬಂಡಹಳ್ಳಿ ಗ್ರಾಮದ- |

| | | |
|---|---|---|
| | -ಸರ್ಕಾರದ ಗಮನಕ್ಕೆ ಬಂದಿದೆಯೇ: (ಮಾಹಿತಿ ನೀಡುವುದು) | -ಸರ್ವೆ ನಂ. 57 ರಲ್ಲಿನ 11-20 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 3-B ರಡಿಯಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ. |
| ಇ) | ಬಂಡೇಹಳ್ಳಿ ಗ್ರಾಮದಲ್ಲಿ ಕಸ ವಿಲೇವಾರಿ ಸ್ಥಳ ಮಂಜೂರಾಗಿ ದ್ದರೂ ಸಹ ಸದರಿ ಸ್ಥಳದಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿರುವ ಉದ್ದೇಶವೇನು; ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? (ಪೂರ್ಣ ಮಾಹಿತಿ ನೀಡುವುದು) | • ಮೆ\|\| ಕೆಸಿಸಿ ಬಿಲ್ಡ್ ಕಾನ್ ಲಿ., ರವರು ಭಾರತ ಮಾಲಾ ಪರಿಯೋಜನೆ ಅಡಿಯಲ್ಲಿ ಬಂಗಾರಪೇಟೆಯಿಂದ ಬೇತಮಂಗಲದವರೆಗೆ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಅವಶ್ಯಕವಿರುವ ಕಟ್ಟಡ ಕಲ್ಲಿನ ಉತ್ಪನ್ನಗಳಾದ ಎಂ-ಸ್ಯಾಂಡ್, ಜಲ್ಲಿ ಮತ್ತು ಮುರ್ರಂ ಪೂರೈಕೆಗಾಗಿ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಬಂಡಹಳ್ಳಿ ಗ್ರಾಮದ ಸರ್ವೆ ನಂ. 57 ರಲ್ಲಿನ 11-20 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 3-B ರಡಿಯಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗಾಗಿ ದಿನಾಂಕ 30.09.2021 ರಂದು ಅರ್ಜಿ ಸಲ್ಲಿಸಿರುತ್ತಾರೆ.<br><br>• ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿತ ಪ್ರದೇಶದಿಂದ 21 ಮೀಟರ್ ಅಂತರದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕವಿರುವುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 6(2) ರ ಷರತ್ತುಗಳನ್ನು ಪೂರೈಸದ ಕಾರಣ ಉರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಂಡಹಳ್ಳಿ ಗ್ರಾಮದ ಸರ್ವೆ ನಂ. 57 ರಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಘನ ತ್ಯಾಜ್ಯ ವಿಂಗಡಣಾ ಘಟಕವನ್ನು ಮೆ\|\| ಕೆ.ಸಿ.ಸಿ ಬಿಲ್ಡ್ ಕಾನ್ ರವರು ಸ್ವಂತ ವೆಚ್ಚದಲ್ಲಿ ನಿರ್ಮಿಸಿ ಕೊಡುವುದಾಗಿ ಒಪ್ಪಿ, ಘಟಕವನ್ನು ನಿರ್ಮಿಸಲು ₹ 6,30,000/- ಗಳನ್ನು ಗ್ರಾಮ ಪಂಚಾಯಿತಿ ಯವರಿಗೆ ಪಾವತಿಸಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಉದ್ದೇಶಕ್ಕಾಗಿ ಕಲ್ಲುಗಣಿ ಗುತ್ತಿಗೆ ಪಡೆಯುವುದಕ್ಕಾಗಿ ಘನ ತ್ಯಾಜ ವಿಂಗಡಣಾ ಘಟಕವನ್ನು ಬಂಡಹಳ್ಳಿ ಗ್ರಾಮದ ಸರ್ವೆ ನಂ. 57 ರಿಂದ ಸ್ಥಳಾಂತರಿಸಲು ಕೋರಿರುತ್ತಾರೆ.<br><br>ಸದರಿ ಪ್ರಸ್ತಾವನೆಯನ್ನು ಒಪ್ಪಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ಪತ್ರ ಸಂಖ್ಯೆ: ಎಲ್.ಎನ್.ಡಿ (ಘನತ್ಯಾಜ್ಯ)(ಮು):ಸಿಆರ್: 68/2018-19, ದಿನಾಂಕ 05.02.2022 ರಲ್ಲಿ ಘನ ತ್ಯಾಜ ವಿಂಗಡಣಾ ಘಟಕವನ್ನು ಬಂಡಹಳ್ಳಿ ಗ್ರಾಮದ ಸರ್ವೆ ನಂ. 57 ರಿಂದ ಅವುಲಮರಕಲಘಟ್ಟ ಗ್ರಾಮದ ಸರ್ವೆ ನಂ.133 ರ 1-00 ಎಕರೆ ಜಮೀನಿನಲ್ಲಿ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. |

. . . 3

| | | |
|---|---|---|
| | | • ಮುಂದುವರೆದು, ಮೆ॥ ಕೆಸಿಸಿಬಿಲ್ಡ್ಕಾನ್ಲಿ., ರವರಿಗೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಉದ್ದೇಶಕ್ಕಾಗಿ ಬಂಡಹಳ್ಳಿ ಗ್ರಾಮದ ಸರ್ವೆನಂ. 57 ರಲ್ಲಿನ 11-20 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿಕಲ್ಲುಗಣಿಗುತ್ತಿಗೆಮಂಜೂರಾತಿಗೆಕರ್ನಾಟಕಉಪಖನಿಜರಿಯಾಯಿತಿನಿಯಮಗಳು, 1994ರ ನಿಯಮ 8(5) ರಂತೆಕಂದಾಯಮತ್ತುಅರಣ್ಯಇಲಾಖೆನಿರಾಕ್ಷೇಪಣಾಪತ್ರಗಳನ್ನುಪಡೆದುಜಿಲ್ಲಾಧಿಕಾರಿ, ಕೋಲಾರ ಜಿಲ್ಲೆಇವರ ಅಧ್ಯಕ್ಷತೆಯಲ್ಲಿನ ಕೋಲಾರ ಜಿಲ್ಲಾಟಾಸ್ಕ್ ಫೋರ್ಸ್ (ಗಣಿ) ಸಮಿತಿಸಭೆಯಲ್ಲಿಮಂಡಿಸಿಶಿಫಾರಸ್ಸುಪಡೆಯಲಾಗಿರುತ್ತದೆ.<br><br>• ಕೋಲಾರ ಜಿಲ್ಲಾಟಾಸ್ಕ್ ಫೋರ್ಸ್ (ಗಣಿ) ಸಮಿತಿಯ ಶಿಫಾರಸ್ಸಿನ ಮೇರೆಗೆ ಸರ್ಕಾರದಆದೇಶಸಂಖ್ಯೆ: ಸಿಐ 225 ಎಂಎಂಎನ್ 2022, ದಿನಾಂಕ 30.06.2022ರಲ್ಲಿ, ದಿನಾಂಕ 17.01.2024 ರವರೆಗೆ ಅಥವಾ ಕಾಮಗಾರಿ ಮುಕ್ತಾಯವಾಗುವ ಅವಧಿಯವರೆಗೆ ಮೆ॥ ಕೆಸಿಸಿಬಿಲ್ಡ್ಕಾನ್ಲಿ., ರವರಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಿದ್ದು, ಈ ಬಗ್ಗೆ ದಿನಾಂಕ 30.06.2022 ರಂದು ಅಧಿಸೂಚನೆ ಜಾರಿಮಾಡಲಾಗಿರುತ್ತದೆ.<br><br>• ಅದರಂತೆ, ಹಿರಿಯ ಭೂವಿಜ್ಞಾನಿ, ಕೋಲಾರರವರು ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಕರ್ನಾಟಕ ರಾಜ್ಯಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರಅನುಮತಿಪತ್ರವನ್ನುಪಡೆದುದಿನಾಂಕ 17.01.2024 ರವರೆಗೆನಿಯಮಾನುಸಾರ ಕಲ್ಲುಗಣಿ ಗುತ್ತಿಗೆ ಕರಾರು ದಸ್ತಾವೇಜನ್ನು ಅಮಲ್ಜಾರಿ ಮಾಡಿರುತ್ತಾರೆ. |

ಸಂಖ್ಯೆಸಿಐ-ಎಂಎಂಎನ್/347/2022

(ಆಚಾರ ಹಾಲಪ್ಪಬಸಪ್ಪ)
ಗಣಿಮತ್ತುಭೂವಿಜ್ಞಾನಹಾಗೂ
ಮಹಿಳಾಮತ್ತುಮಕ್ಕಳಅಭಿವೃದ್ಧಿಮತ್ತು
ವಿಕಲಚೇತನರ, ಹಿರಿಯನಾಗರಿಕರ
ಸಬಲೀಕರಣಸಚಿವರು.